**ಕರ್ನಾಟಕ ಸರ್ಕಾರ**
**(ಪೊಲೀಸ್ ಇಲಾಖೆ)**

ಸಂ: ಅಪರಾಧ-3(1)/38/2018

ಮಹಾ ನಿರ್ದೇಶಕರು ಮತ್ತು ಆರಕ್ಷಕ
ಮಹಾ ನಿರೀಕ್ಷಕರವರ ಕಛೇರಿ
ನೃಪತುಂಗ ರಸ್ತೆ, ಬೆಂಗಳೂರು
ದಿನಾಂಕ: -07-2018

# ಸುತ್ತೋಲೆ

ವಿಷಯ : ಮಹಿಳೆಯರ ಮತ್ತು ಮಕ್ಕಳ ಮೇಲಿನ ಅಪರಾಧಗಳ ಕುರಿತಂತೆ ದಂಡ ವಿಧಿ(ತಿದ್ದುಪಡಿ) ಅಧಿನಿಯಮ ಸುಗ್ರೀವಾಜ್ಞೆ-2018 ಅನ್ನು ಜಾರಿಗೊಳಿಸಿರುವ ಕುರಿತು.

ಉಲ್ಲೇಖ : 1) ಸರ್ಕಾರದ ಕಾರ್ಯದರ್ಶಿಗಳು,(ಪಿಸಿಎಎಸ್), ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಅ.ಸ. ಪತ್ರ ಸಂಖ್ಯೆ : 38 ಪಿಸಿಆರ್ 2018, ದಿನಾಂಕ : 16/5/2018.

2) ಕೇಂದ್ರ ಗೃಹ ಕಾರ್ಯದರ್ಶಿಗಳಿಗೆ ಅ.ಸ. ಪತ್ರ ಸಂಖ್ಯೆ : 1/03/2018-Judle.Cell-I(Pt.II), ದಿನಾಂಕ : 27/4/2018.

** ** **

ಮಹಿಳೆಯರ ಮತ್ತು ಮಕ್ಕಳ ಮೇಲಿನ ಅಪರಾಧಗಳಾದ ಅತ್ಯಾಚಾರ, ಲೈಂಗಿಕ ಕಿರುಕುಳ ಹಾಗೂ ಇತರೆ ಅಪರಾಧಗಳನ್ನು ತಡೆಗಟ್ಟಿ, ಮಹಿಳೆಯರು ಮತ್ತು ಮಕ್ಕಳಲ್ಲಿ ಸುರಕ್ಷತೆಯ ಭಾವ, ಅತ್ಮವಿಶ್ವಾಸ ಹಾಗೂ ಧೈರ್ಯವನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಸರ್ಕಾರವು ಅಪರಾಧ ಕಾನೂನನ್ನು (Criminal Law) ಬಲಪಡಿಸಲು ಅಪರಾಧ ಕಾನೂನು (ತಿದ್ದುಪಡಿ), ಸುಗ್ರೀವಾಜ್ಞೆ-2018 [Criminal Law (Ordinance)], 2018 ಅನ್ನು ಭಾರತ ಸರ್ಕಾರವು ಜಾರಿಗೆ ತಂದಿರುತ್ತದೆ, ಈ ದಂಡ ವಿಧಿ (ತಿದ್ದುಪಡಿ) ಯಲ್ಲಿ (ಭಾರತೀಯ ದಂಡ ಸಂಹಿತೆ, 1860, ಭಾರತೀಯ ಸಾಕ್ಷ್ಯ ಅಧಿನಿಯಮ, 1872, ಭಾರತ ದಂಡ ಪ್ರಕ್ರಿಯಾ ಸಂಹಿತೆ, 1973, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ, 2012) ಗಳಿಗೆ ತಿದ್ದುಪಡಿಯನ್ನು ತಂದಿರುತ್ತದೆ. ಈ ತಿದ್ದುಪಡಿಯಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿರುತ್ತದೆ ಹಾಗೂ ತನಿಖಾ ಅವಧಿಯನ್ನು 90 ದಿನದಿಂದ 60 ದಿನಗಳಿಗೆ ಇಳಿಸಲಾಗಿದೆ. ತಿದ್ದುಪಡಿ ಮಾಡಿರುವ ಮತ್ತು ಸೇರಿಸಿರುವ ಕಲಂಗಳು ಈ ಕೆಳಕಂಡಂತಿದೆ.

<u>ಭಾರತ ದಂಡ ಸಂಹಿತೆ (Indian Penal Code, 1860):</u>

| ಕಲಂಗಳು | ಈ ಹಿಂದೆ ಜಾರಿಯಲ್ಲಿದ್ದ ಶಿಕ್ಷೆಯ ಪ್ರಮಾಣ/ಹೊಸದಾಗಿ ಸೇರಿಸಿರುವ ಕಲಂ | ತಿದ್ದುಪಡಿ /ಸೇರಿಸಿರುವ ಕಲಂಗಳ ಶಿಕ್ಷೆಯ ಪ್ರಮಾಣ |
|---|---|---|
| **ಕಲಂ 376** | 7 ವರ್ಷಗಳ ಶಿಕ್ಷೆ ಹಾಗೂ ಜೀವಾಧಿ ಶಿಕ್ಷೆಗೆ ವಿಸ್ತರಿಸಿರುವುದು ಮತ್ತು ದಂಡ. | 7 ರಿಂದ 10 ವರ್ಷಗಳಿಗೆ ಹೆಚ್ಚಿಸಿರುವುದು ಹಾಗೂ ಜೀವವಾಧಿ ಶಿಕ್ಷೆಗೆ ವಿಸ್ತರಿಸಿರುವುದು ಮತ್ತು ದಂಡ. |
| **ಕಲಂ 376ಎಬಿ** | 12 ವರ್ಷದೊಳಗಿನವರ ಮೇಲಿನ ಅತ್ಯಾಚಾರಕ್ಕೆ ಶಿಕ್ಷೆ. | ಕನಿಷ್ಠ 20 ವರ್ಷಗಳ ಶಿಕ್ಷೆಯಿಂದ ಆರೋಪಿಯ ಜೀವ ಇರುವ ವರೆಗೆ ಸೆರೆವಾಸದ ಶಿಕ್ಷೆಗೆ ವಿಸ್ತರಣೆ ಮತ್ತು ದಂಡ ಅಥವಾ ಮರಣದಂಡಣೆ. |
| **ಕಲಂ 376ಡಿಎ** | 16 ವರ್ಷದೊಳಗಿನವರ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆ (Gang rape)ಶಿಕ್ಷೆ. | ಜೀವಾವಧಿ ಶಿಕ್ಷೆ ಅಂದರೆ ಅರೋಪಿಯ ಜೀವ ಇರುವ ವರೆಗೆ ಸೆರೆವಾಸ ಮತ್ತು ದಂಡ |
| **ಕಲಂ 376ಡಿಬಿ** | 12 ವರ್ಷದೊಳಗಿನವರ ಮೇಲಿನ ಸಾಮೂಹಿಕ ಅತ್ಯಾಚಾರಕ್ಕೆ (Gang rape) ಶಿಕ್ಷೆ. | ಜೀವಾವಧಿ ಶಿಕ್ಷೆ ಅಂದರೆ ಅರೋಪಿಯ ಜೀವ ಇರುವ ವರೆಗೆ ಸೆರೆವಾಸ ಮತ್ತು ದಂಡ ಅಥವಾ ಮರಣದಂಡಣೆ. |

ಅತ್ಯಾಚಾರ ಪ್ರಕರಣಗಳಲ್ಲಿ ದೂರನ್ನು ದಾಖಲಿಸಿಕೊಳ್ಳಲು ನಿರಾಕರಿಸುವ ಮತ್ತು ನೊಂದವರ ವಿವರಗಳನ್ನು/ಗುರುತನ್ನು (Victim's Details/Identity) ಬಹಿರಂಗಪಡಿಸದೆ ಇರುವುದಕ್ಕೆ ಸಂಬಂಧಿಸಿದಂತೆ, ಭಾರತೀಯ ದಂಡ ಸಂಹಿತೆ (ಐಪಿಸಿ) <u>**ಕಲಂ 166ಎ ಕ್ಲಾಸ್ (ಸಿ)**</u> ಮತ್ತು <u>**ಕಲಂ 228ಎ ಸಹ ಕಲಂ (1)**</u> **ಗಳಿಗೆ** ಸಹ ತಿದ್ದುಪಡಿಯನ್ನು ಮಾಡಲಾಗಿದೆ.

ಈ ಮೇಲಿನ ಭಾರತ ದಂಡ ಸಂಹಿತೆಯ ಕಾನೂನಿಗೆ ಅನುಗುಣವಾಗಿ ;

**ಭಾರತೀಯ ಸಾಕ್ಷ್ಯ ಅಧಿನಿಯಮ (Indian Evidence Act- 1872)**

ಭಾರತೀಯ ಸಾಕ್ಷ್ಯ ಅಧಿನಿಯಮ ಕಾಯ್ದೆಯ ಕಲಂ **ಕಲಂ 53** ( ಅಪರಾಧ ಪ್ರಕರಣಗಳಲ್ಲಿ ಪೂರ್ವ ಸನ್ನಡತೆಯ ಅವಶ್ಯಕತೆ) ರಡಿಯಲ್ಲಿ 376ಎ, 376ಎಬಿ, 376ಬಿ, 376ಸಿ, 376ಡಿ, 376ಡಿಎ, 376ಬಿಡಿ ಕಲಂಗಳನ್ನು ಹಾಗೂ **ಕಲಂ 146** ಕಾನೂನಾತ್ಮಕ ಪಾಟಿ ಸವಾಲು (cross-exmination) ರಡಿಯಲ್ಲಿ 376ಎ, 376ಎಬಿ, 376ಬಿ, 376ಸಿ, 376ಡಿ, 376ಡಿಎ, 376ಬಿಡಿ ಕಲಂಗಳನ್ನು ಹೊಸದಾಗಿ ಸೇರಿಸಲಾಗಿದೆ.

**ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ, 2012 (POCSO-2012)**

ಪೋಕ್ಸೋ ಕಾಯ್ದೆಯ ಕಲಂ 42, ಬದಲಿ / ಹೆಚ್ಚುವರಿ (Alternative/Greater degree punishment) ಶಿಕ್ಷೆಗೆ ಸಂಬಂಧಿಸಿದ್ದು, ಈ ಕಲಂಗೆ 376ಎ, 376ಎಬಿ, 376ಸಿ, 376ಡಿ, 376ಡಿಎ, 376ಡಿಬಿ ಕಲಂಗಳನ್ನು ಹೊಸದಾಗಿ ಸೇರಿಸಿ ತಿದ್ದುಪಡಿಯನ್ನು ಮಾಡಲಾಗಿರುತ್ತದೆ.

**ಅತ್ಯಾಚಾರ ಪ್ರಕರಣಗಳಲ್ಲಿ ತನಿಖೆಯನ್ನು ಕಡ್ಡಾಯವಾಗಿ 2 ತಿಂಗಳುಗಳಲ್ಲಿ ಪೂರ್ಣಗೊಳಸಬೇಕೆಂದು ಹಾಗೂ ನ್ಯಾಯಾಲಯದ ವಿಚಾರಣೆಯನ್ನು 2 ತಿಂಗಳುಗಳಲ್ಲಿ ಹಾಗೂ ಮೇಲ್ಮನವಿಗಳನ್ನು 6 ತಿಂಗಳುಗಳಲ್ಲಿ ಇತ್ಯರ್ಥಪಡಿಸಲು ದಂಡ ಪ್ರಕ್ರಿಯೆ ಸಂಹಿತೆಗೆ ತಿದ್ದುಪಡಿಯನ್ನು ತರಲಾಗಿದೆ.**

**12-16** ವರ್ಷದೊಳಗಿನ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ ಅಥವಾ ಸಾಮೂಹಿಕ ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಗೆ ಮುಂಜಾಮೀನು (Anticipatory bail) ಅನ್ನು ಮಂಜೂರಿಸುವುದನ್ನು ಸಹ **ತೆಗೆದುಹಾಕಲಾಗಿದೆ/ನಿಷೇಧಿಸಲಾಗಿದೆ.**

ಹಾಗೆಯೇ ಅತ್ಯಾಚಾರ ಪ್ರಕರಣಗಳಲ್ಲಿ ಸಹಜ ಜಾಮೀನುಗಾಗಿ ಉಚ್ಚನ್ಯಾಯಾಲಯ ಅಥವಾ ಸತ್ರ ನ್ಯಾಯಾಲಯಗಳಲ್ಲಿ ಸಲ್ಲಿಸುವ ಅರ್ಜಿಗಳನ್ನು ಇತ್ಯರ್ಥ ಪಡಿಸುವ ಮುನ್ನ ಸರ್ಕಾರಿ

ಅಭಿಯೋಜಕರಿಗೆ ನ್ಯಾಯಾಲಯದ ಮುಂದೆ ಹಾಜರಾಗಲು 15 ದಿನಗಳ ಕಾಲಾವಕಾಶದೊಂದಿಗೆ ನೋಟೀಸ್ ಜಾರಿ ಮಾಡುವುದು, ಹಾಗೂ ನೊಂದವರ ಪರವಾಗಿ ಅವರ ಪ್ರತಿನಿದಿಯ ಹಾಜರಾತಿ ಕಡ್ಡಾಯ ಮಾಡಲಾಗಿದೆ.

ಘಟಕಾಧಿಕಾರಿಗಳು, ಮೇಲಿನ ದಂಡ ವಿಧಿ ತಿದ್ದುಪಡಿಯ ಬಗ್ಗೆ ತಮ್ಮ ವ್ಯಾಪ್ತಿಯ ಎಲ್ಲಾ ಪೊಲೀಸ್ ಠಾಣೆಗಳ ತನಿಖಾಧಿಕಾರಿಗಳ ಹಾಗೂ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು, ಈ ತಿದ್ದುಪಡಿಯ ಕುರಿತು ತಮ್ಮ ಅಧಿಕಾರಿಗಳಿಗೆ ಸೂಕ್ತ ತರಭೇತಿಯನ್ನು ನೀಡುವುದು, ವಿಶೇಷವಾಗಿ ತನಿಖಾಧಿಕಾರಿಗಳು ಮಹಿಳೆಯರ ಹಾಗೂ ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂತಹ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು ಯಾವ ರೀತಿ ನಿರ್ವಹಿಸಬೇಕೆಂಬುದರ ಬಗ್ಗೆ ಕಾರ್ಯಗಾರಗಳನ್ನು ಏರ್ಪಡಿಸಿ, ಅವರ ವೃತ್ತಿಪರತೆಯನ್ನು ಮತ್ತು ಸಾಮರ್ಥ್ಯ ಹೆಚ್ಚಲು ಕ್ರಮ ಕೈಗೊಳ್ಳುವುದು.

ಇದರೊಂದಿಗೆ, ಭಾರತ ಗೆಜೆಟ್‌ಪತ್ರದ ಅಪರಾಧ ಕಾನೂನು (ತಿದ್ದುಪಡಿ) ಸುಗ್ರೀವಾಜ್ಞೆ, 2018ರ ಪ್ರತಿಯನ್ನು ಲಗತ್ತಿಸಿದೆ.

ಸುತ್ತೋಲೆಯನ್ನು ಸ್ವೀಕರಿಸಿರುವುದಕ್ಕೆ ಸ್ವೀಕೃತಿಯನ್ನು ಕಡ್ಡಾಯವಾಗಿ ಕಳುಹಿಸುವುದು.

**(ನೀಲಮಣಿ ಎನ್. ರಾಜು)**
ಮಹಾ ನಿರ್ದೇಶಕರು ಮತ್ತು ಆರಕ್ಷಕ
ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ

ಗೆ,

1) ಪೊಲೀಸ್ ಮಹಾ ನಿರ್ದೇಶಕರು, ಸಿಐಡಿ, ಬೆಂಗಳೂರು.
2) ಪೊಲೀಸ್ ಮಹಾ ನಿರ್ದೇಶಕರು, ತರಬೇತಿ, ಬೆಂಗಳೂರು.
3) ಎಲ್ಲಾ ಪೊಲೀಸ್ ಕಮೀಷನರ್‌ಗಳು.
4) ಎಲ್ಲಾ ವಲಯ ಪೊಲೀಸ್ ಮಹಾ ನಿರೀಕ್ಷಕರುಗಳು.
5) ಕರ್ನಾಟಕ ರಾಜ್ಯ ಪೊಲೀಸ್ ಅಕಾಡಮಿ, ಮೈಸೂರು.
6) ಎಲ್ಲಾ ಘಟಕದ ಪೊಲೀಸ್ ಅಧೀಕ್ಷಕರುಗಳು, ಕೆಜಿಎಫ್ ಮತ್ತು ರೈಲ್ವೇಸ್ ಸೇರಿದಂತೆ.
7) ಉಪ ಪೊಲೀಸ್ ಕಮೀಷನರ್‌ಗಳು, ಎಲ್ಲಾ ಕಮಿಷನರೇಟ್‌ಗಳು.
8) ರಾಜ್ಯದ ಎಲ್ಲಾ ಪೊಲೀಸ್ ತರಬೇತಿ ಶಾಲೆಗಳು.
9) ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳು.